ನಾಯಕರಿಗೆ ಇದರ ಅರಿವು ಉಂಟಾಗಬೇಕೆಂದು ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದೀರಾ ? ಈ ಹೆಲಿಕ್ಯಾಪ್ಟರ್‌ನ್ನು ಉಪಯೋಗಿಸುವಾಗ ಇದು ಏನಾದರೂ ಕೆಟ್ಟು ನಿಂತಿತ್ತೇ ? ಹಾಗೆ ಕೆಟ್ಟು ನಿಂತಿದ್ದರೆ ಎಲ್ಲಿ ? ಮತ್ತು ಯಾವಾಗ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನೂ ಕೂಡ ೨-೩ ಸಾರಿ ವೀಕ್ಷಣೆ ಮಾಡುವುದಕ್ಕೆ ಹೋಗಿದ್ದೇವೆ. ಸರ್ವೇ ಸಾಮಾನ್ಯವಾಗಿ ಕೆಲವು ಸಲಹತ್ತುಗಳನ್ನು ಪ್ರಧಾನ ಮಂತ್ರಿಗಳಿಗೆ, ಮುಖ್ಯ ಮಂತ್ರಿಗಳಿಗೆ ಕೊಡತಕ್ಕ ದೃಷ್ಟಿಯಿಂದ ನಿಯಮಗಳನ್ನು ಮಾಡಿರುತ್ತೇವೆ. ಅಲ್ಲಿ ಪ್ರಧಾನ ಮಂತ್ರಿಗಳಿಗೆ ವಿಮಾನವನ್ನು ಕೊಟ್ಟಿರಬಹುದು; ಇಲ್ಲಿ ಮುಖ್ಯ ಮಂತ್ರಿಗಳಿಗೆ ಮಿತವ್ಯಯ ದೃಷ್ಟಿಯಿಂದ ಹೆಲಿಕ್ಯಾಪ್ಟರ್‌ನ್ನು ಕೊಟ್ಟಿರಬಹುದು. ಆದರೆ ವಿರೋಧಪಕ್ಷದವರಿಗೆ ಅಥವಾ ವಿರೋಧ ಪಕ್ಷದ ನಾಯಕರಿಗೆ ಕೊಡಬೇಕೆಂದು ಇದನ್ನು ಮಾಡಿಲ್ಲ. ಅಲ್ಲಿಯೂ ಈ ಪದ್ಧತಿ ಇಲ್ಲ. ಇಲ್ಲಿಯೂ ಈ ಪದ್ಧತಿ ಇಲ್ಲ ಇದರ ಜೊತೆಗೆ ಬೇರೆ ರಾಜಕೀಯ ಪಕ್ಷಗಳ ಮುಖಂಡರು ಅಥವಾ ರಾಜಕೀಯ ಪಕ್ಷಗಳು ಬಾಡಿಗೆಗೆ ಕೇಳಿದರೆ ಕೊಡಬೇಕಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ಕಾಲವನ್ನು ಮಿತವ್ಯಯ ಮಾಡಬೇಕೆಂದು ತಾವು ಹೆಲಿಕ್ಯಾಪ್ಟರನ್ನು ಉಪಯೋಗಿಸುತ್ತಿದ್ದೀರಿ. ಇದೇರೀತಿ ಎಲ್ಲಮಂತ್ರಿಗಳಿಗೂ ಒಂದೊಂದು ಹೆಲಿಕ್ಯಾಪ್ಟರನ ಕಾಲವನ್ನು ಕೊಟ್ಟು ಇನ್ನೂ ಮಿತವ್ಯಯ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಎಲ್ಲ ಮಂತ್ರಿಗಳಿಗೂ ಒಂದೊಂದು ಹೆಲಿಕ್ಯಾಪ್ಟರ್ ಕೊಡುವುದಕ್ಕೆ ನಮಗೆ ರಿಸೊರ್ಸಸ್ ಇಲ್ಲ. ಮುಖ್ಯ ಮಂತ್ರಿಗಳು ಉಪಯೋಗ ಮಾಡುವುದಕ್ಕೂ, ಬೇರೆ ಮಂತ್ರಿಗಳು ಉಪಯೋಗ ಮಾಡುವುದಕ್ಕೂ ವ್ಯತ್ಯಾಸ ಇದೆ. ಸರ್ಕಾರದ ದಕ್ಷತೆ, ಮತ್ತು ಚಾಲನೆ ಹೆಚ್ಚಾಗಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಹೆಲಿಕ್ಯಾಪ್ಟರನ್ನು ಹೆಚ್ಚಾಗಿ ಉಪಯೋಗ ಮಾಡಬೇಕು.

ರೋಗದಿಂದ ತೆಂಗಿನ ಮರಗಳಿಗೆ ಹಾನಿ

೨೭(೧೮೫) ಶ್ರೀ ಬಿ. ಎಮ್. ಇದಿನಬ್ಬ (ಉಳ್ಳಾಲ).—ಕೃಷಿ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡದ ಕರಾವಳಿಯುದ್ದಕ್ಕೂ ೧೯೮೬ರಲ್ಲಿ ತೆಂಗಿನ ಮರಗಳಿಗೆ ಕಪ್ಪು ತಲೆ ಹುಳುಗಳಿಂದ ಅಪಾರಹಾನಿ ಯಾದುದು ನಿಜವಲ್ಲವೇ?

ಆ) ಈ ರೋಗದಿಂದ ಹಾನಿಗೊಳಗಾದ ತೆಂಗಿನ ಮರಗಳೆಷ್ಟು ಹಾಗೂ ಇದರ ನಿವಾರಣೆ ಸಾಧ್ಯವಿಲ್ಲವೇ?

ಇ) ಈ ರೋಗವನ್ನು ತಡೆಗಟ್ಟಲು ಸರ್ಕಾರದವರೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ; ಹಾಗಿದ್ದಲ್ಲಿ ಅದು ಏನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಸ್ವಲ್ಪ ಮಟ್ಟಿಗೆ ಕಪ್ಪು ತಲೆ ಹುಳುಗಳ ಬಾಧೆಯಿಂದ ತೆಂಗಿನ ಮರಗಳಿಗೆ ಹಾನಿಯಾಗಿರುವುದು ನಿಜ.

ಆ) ಇಲಾಖೆಯು ಕೈಗೊಂಡ ಸಮೀಕ್ಷೆ ಪ್ರಕಾರ ಜನವರಿ ೧೯೮೬ ರಿಂದ ಈಚೆಗೆ ೭೮,೮೫೦ ಮರಗಳಲ್ಲಿ ಈ ಕೀಟ ಭಾದೆ ಕಾಣಿಸಿಕೊಂಡಿದೆ. ಇದರ ನಿವಾರಣೆ ಸಾಧ್ಯ.

ಇ) ಈ ಕಪ್ಪು ತಲೆ ಹುಳುಗಳ ನಿಯಂತ್ರಣವನ್ನು ಮಾಡಲು ಸರ್ಕಾರ ೧೯೮೧-೮೨ನೇ ಇಸವಿಯಲ್ಲಿ ಸಮಗ್ರ ಹತೋಟಿ ಯೋಜನೆಯೊಂದನ್ನು ಮಂಜೂರು ಮಾಡಿದ್ದು ಈ ಯೋಜನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಕಾರ್ಯನಿರ್ವಹಣೆ ಮಾಡುತ್ತಿದೆ. ಇದರ ಅಂಗವಾಗಿ ಈ ಕೆಳಕಂಡ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.—

(೧) ಕೀಟ ಬಾದೆಗೆ ತುತ್ತಾದ ಸಣ್ಣ ಗಿಡಗಳ ಗರಿಗಳನ್ನು ಕತ್ತರಿಸಿ ಸುಡುವುದು.

(೨) ಕೀಟ ಬಾದೆಗೆ ತುತ್ತಾದ ಸಣ್ಣ ಮರಗಳಿಗೆ ಕೀಟ ನಾಶಕವನ್ನು ಸಿಂಪಡಿಸುವುದು.

(ಖ) ಕೀಟ ಭಾದೆ ಶೇ. ೫೦ಕ್ಕಿಂತ ಜಾಸ್ತಿ ಇದ್ದಲ್ಲಿ ಕಾಂಡಕ್ಕೆ ಮೋನೋ ಕ್ರೋಟೋಫಸ್ ಕೀಟ ನಾಶಕವನ್ನು ಚುಚ್ಚುಮದ್ದಿನ ರೂಪದಲ್ಲಿ ಕೊಡುವುದು.

(ಗ) ಪರ ತಂತ್ರದ ಜೀವಿಗಳನ್ನು ಉತ್ಪಾದಿಸಿ ಸಿಹಾವಳಿಗೊಳಗಾದ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡುವುದು.

ಈ ಯೋಜನೆಯ ಅಂಗವಾಗಿ ಈ ಜಿಲ್ಲೆಯಲ್ಲಿ ಈಗಾಗಲೇ ಒಂದು ದೊಡ್ಡ ಪ್ರಮಾಣದ ಹಾಗೂ ಮೂರು ಕಿರು ಪ್ರಯೋಗ ಶಾಲೆಗಳನ್ನು ಕ್ರಮವಾಗಿ ತುಂಬೆ, ಮಂಗಳೂರು, ಉಡುಪಿ ಹಾಗೂ ಕುಂದಾಪುರ ತಾಲ್ಲೂಕುಗಳಲ್ಲಿ ಪರೋಪಜೀವಿಗಳನ್ನು ಉತ್ಪಾದಿಸಿ ಬಿಡುಗಡೆ ಮಾಡಲಾಗುತ್ತದೆ. ಈ ಕೀಟ ಪ್ರಸಾರವನ್ನು ತಡೆಗಟ್ಟಲು ಸುಮಾರು ೫೧೯ ಲೀಟರ್ ಮಾನೋಕ್ರೋಟೋಫಸ್ ಕೀಟ ನಾಶಕವನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಉಚಿತವಾಗಿಯೂ ಹಾಗೂ ದೊಡ್ಡ ರೈತರಿಗೆ ಶೇ. ೫೦ರ ರಿಯಾಯಿತಿ ದರದಲ್ಲಿಯೂ ಈಗಾಗಲೇ ಒದಗಿಸಿಕೊಡಲಾಗಿದ್ದು, ಸುಮಾರು ೨೭,೧೧೨ ಮರಗಳಿಗೆ ಉಪಚರಿಸಲಾಗಿದೆ. ಅಲ್ಲದೆ, ೧೩.೨ ಲಕ್ಷ ಪರೋಪಜೀವಿಗಳನ್ನು ಈ ಕೀಟ ಭಾಧೆಗೊಳಗಾದ ತೆಂಗಿನ ತೋಟಗಳಿಗೆ ಬಿಡುಗಡೆ ಮಾಡಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ತೆಂಗಿನ ಮರಗಳನ್ನು ಕಲ್ಪವೃಕ್ಷವೆಂದು ಭಾವಿಸಿರುತ್ತಾರೆ. ಇಂಥ ಮರಗಳಿಗೆ ಈ ರೀತಿಯಾದ ರೋಗ ತಗಲುತ್ತಿರುವುದರಿಂದ ೧೯೮೧-೮೨ ರಲ್ಲಿಯೇ ಇದನ್ನು ನಿಯಂತ್ರಣ ಮಾಡಬೇಕೆಂದು ಒಂದು ವ್ಯವಸ್ಥಿತವಾದ ಯೋಜನೆಯನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಸುಮಾರು ೭೬,೮೫೦ ಮರಗಳನ್ನು ಪತ್ತೆಹಚ್ಚಿ ಇದನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಲಾಗಿದೆ ಎಂದು ಹೇಳಿರುತ್ತಾರೆ. ಆದ್ದರಿಂದ ಇಲಾಖೆಯವರು ಉಳಿದ ಭಾಗಕ್ಕೆ ಸರಿಯಾದ ಕ್ರಮ ತೆಗೆದುಕೊಂಡು ಈ ರೋಗವನ್ನು ನಿಯಂತ್ರಿಸುವುದಕ್ಕೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ ಈ ರೋಗವು ವ್ಯಾಪಕವಾಗಿ ಹಬ್ಬಿ ತೆಂಗಿನ ಮರಗಳು ರೋಗಕ್ಕೆ ತುತ್ತಾಗಿರತಕ್ಕಂಥದ್ದು ನಿಜವಿರುತ್ತದೆ. ಆದ್ದರಿಂದ ಇಲಾಖೆಯವರು ಎಚ್ಚರಿಕೆಯನ್ನು ವಹಿಸಿ ದಟ್ಟವಾಗಿ ಅಬ್ಬಿರತಕ್ಕಂಥ ಈ ರೋಗವನ್ನು ನಿಯಂತ್ರಣ ಮಾಡಲಿಕ್ಕೆ ಶ್ರಮವಹಿಸುತ್ತಿದ್ದಾರೆ. ಆದರೆ ಈ ರೋಗ ತಾಳೆ ಮತ್ತು ಈಚಲು ಮರಗಳಿಂದಲೂ ಬರುವ ಸಾಧ್ಯತೆ ಇರುವುದರಿಂದ ಇದನ್ನೂ ನಿಯಂತ್ರಣ ಮಾಡಲು ತೊಂದರೆ ಇರುತ್ತದೆ ಇಷ್ಟಾದರೂ ನಾನು ಮಂಗಳೂರು ಭಾಗದಲ್ಲಿ ಪ್ರವಾಸವನ್ನು ಕೈಗೊಂಡ ಸಮಯದಲ್ಲಿ ಅಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿದ್ದೇನೆ. ಇನ್ನೂ ಏನಾದರೂ ಶಾಸಕರು ಹೆಚ್ಚಿನ ಸಲಹೆಗಳನ್ನು ಕೊಟ್ಟಲ್ಲಿ ಅದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಈ ರೋಗ ೨-೩ ವರ್ಷಗಳಿಂದ ಬೀಳುತ್ತಲೇ ಇದೆ. ಹೀಗೆ ರೋಗಕ್ಕೆ ತೆಂಗಿನ ಮರಗಳು ಈಡಾಗುತ್ತಿದ್ದರೂ ಸ್ವಲ್ಪ ಸ್ವಲ್ಪ ಮಟ್ಟಿಗೆ ಉಪಶಮನ ಮಾಡುವ ಕಾರ್ಯ ಕೈಗೊಂಡಿರುತ್ತಾರೆ. ೭೮,೮೫೦ ಮರಗಳ ಪೈಕಿ ಸುಮಾರು ೨೭,೧೧೨ ಮರಗಳಿಗೆ ಉಪಶಮನ ಮಾಡಿದ್ದಾರೆಂದರೆ ಉಳಿದ ಮರಗಳಿಗೂ ಕೂಡ ಗಮನಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವಾರಿ.—ಮಾನ್ಯ ಅಧ್ಯಕ್ಷರೇ ೨೭ ಸಾವಿರ ಮರಗಳಿಗೆ ಚುಚ್ಚುಮದ್ದನ್ನು ಹಾಕಿರುವ ಬಗ್ಗೆ ಅಂಕಿ ಅಂಶಗಳು ಇರುತ್ತದೆ. ಇನ್ನಿತರ ಗಿಡಗಳಿಗೂ ಔಷಧಿಯನ್ನು ಸಿಂಪಡಿಸಿ ಕಂಟ್ರೋಲ್ ಮಾಡತಕ್ಕಂಥ ಕಾರ್ಯಾಚರಣೆಯ ಬಗ್ಗೆ ಅಧಿಕಾರಿಗಳು ತೊಡಗಿದ್ದಾರೆ. ಮಾನ್ಯ ಶಾಸಕರು ಹೇಳಿದಂತೆ ತೀವ್ರಗತಿಯಿಂದ ರೋಗವು ವ್ಯಾಪಕವಾಗಿ ಹಬ್ಬದಂತೆ ನೋಡಿಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ರೋಗಬಂದಿರುವುದು ಮಾತ್ರವಲ್ಲ, ಉತ್ತರ ಕನ್ನಡ ಜಿಲ್ಲೆಯಲ್ಲೂ ಇದೇರೀತಿಯಾದ ರೋಗ ತಗಲಿ ಹಲವು ತೆಂಗಿನ ಮರಗಳು ಬಿದ್ದಿರುತ್ತವೆ. ರೋಗ ಬಿದ್ದಾಗ ಹಲಿಕ್ಯಾಪ್ಟರ್ ಮೂಲಕ ಔಷಧಿಯನ್ನು ಸಿಂಪಡಿಸುವ ವಿಧಾನದಿಂದ ಯಶಸ್ಸು ಗಳಿಸಿದ್ದಾರೆ. ಆದ್ದರಿಂದ ಅದೇರೀತಿಯಲ್ಲಿ ತೆಂಗಿನ

ಗಿಡಗಳು ಎಲ್ಲೆಲ್ಲಿ ಇದೆ ಅಲ್ಲೆಲ್ಲ ಪೆಲಿಕ್ಯಾಪ್ಟರ್ ಮೂಲಕ ಔಷಧಿಗಳನ್ನು ಸಿಂಪಡಿಸತಕ್ಕಂಥ ಪ್ರಯತ್ನ ಮಾಡುತ್ತೀರಾ ? ಈಗಾಗಲೇ ಇದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದ ಪಕ್ಷದಲ್ಲಿ ಅದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಬಸವರಾಜ್‌ಪಾಟೀಲ್ ಅನ್ನಾರಿ.—ಮಾನ್ಯ ಅಧ್ಯಕ್ಷರೇ ಗರಿಗಳ ಮೇಲೆ ಔಷಧಿಯನ್ನು ಸಿಂಪಡಿಸುವುದರಿಂದ ಹೆಚ್ಚಿನ ಪರಿಣಾಮವಾಗುವುದಿಲ್ಲ. ಪುರಗಳಿಗೆ ಇಂಜಕ್ಷನ್ ಕೊಡಬೇಕಾಗಿರುತ್ತದೆ. ಮಾನ್ಯ ಶಾಸಕರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ರೈತರೂ ಸಹ ಈ ರೋಗವನ್ನು ತಡೆಗಟ್ಟಲು ಮುಂದೆ ಬರಬೇಕು. ಅವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಅವರು ಹೆಚ್ಚಿನ ಆಸಕ್ತಿಯನ್ನು ವಹಿಸಿದರೆ ಅಧಿಕಾರಿಗಳು ಈ ರೋಗವನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಜಮಖಂಡಿ ತಾಲ್ಲೂಕಾ ಕಛೇರಿಯ ಕಟ್ಟಡದ ನಿರ್ಮಾಣದ ಬಗ್ಗೆ

೨೮ (೫೯ ಎ) ಶ್ರೀ ಬಾಬುರೆಡ್ಡಿ ವಿ ತುಂಗಳ್, (ಬೀಳಗಿ).—ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಜಮಖಂಡಿಯಲ್ಲಿ ತಾಲ್ಲೂಕಾ ಕಛೇರಿಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾರ್ಯ ಆರಂಭವಾದದ್ದು ಯಾವಾಗ?

ಆ) ಕರಾರಿನ ಪ್ರಕಾರ ಈ ಕಟ್ಟಡ ನಿರ್ಮಾಣಕ್ಕಾಗಿ ಗುತ್ತಿಗೆದಾರರಿಗೆ ಕೊಟ್ಟಿದ್ದ ಅವಧಿ ಎಷ್ಟು ?

ಇ) ಮೂರು ವರ್ಷ ಕಳೆದರೂ ಕಟ್ಟಡದ ನಿರ್ಮಾಣ ಪೂರ್ತಿಯಾಗದೇ ಉಳಿದಿರುವುದಕ್ಕೆ ಕಾರಣಗಳೇನು ?

ಈ) ಗುತ್ತಿಗೆದಾರರಿಂದ ವಿಳಂಬವಾಗಿದ್ದರೆ ಆ ಕುರಿತು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಜುತ್ತು ನೀರಾವರಿ ಮಂತ್ರಿಗಳು).—

ಅ) ೧-೪-೧೯೮೩

ಆ) ೩೧-೧೨-೧೯೮೫

ಇ) ಗುತ್ತಿಗೆದಾರನ ಅಸಮರ್ಪಕತೆ

ಈ) ಗುತ್ತಿಗೆ ಕರಾರಿನ ಪೀನಲ್ ಕ್ಲಾಜ಼ ೩ (ಡಿ) ಪ್ರಕಾರ ರೂ. ೧೨೨೦-೦೦ ದಂಡವನ್ನು ಬಿಲ್ಲುಗಳಿಂದ ವಸೂಲು ಮಾಡಲಾಗಿದೆ. ಬಾಕಿ ಕೆಲಸವನ್ನು ಗುತ್ತಿಗೆದಾರರ ವೆಚ್ಚದಲ್ಲಿ ಇಲಾಖಾವತಿಯಿಂದ ತೆಗೆದುಕೊಳ್ಳಲಾಗಿದೆ. ಪೂರ್ತಿ ಕೆಲಸವನ್ನು ಜೂನ್ ೧೯೮೭ ರೊಳಗೆ ಮುಗಿಸಲಾಗುವುದು. ಗುತ್ತಿಗೆದಾರರ ಹೆಸರನ್ನು ಅನುಮೋದಿತ ಗುತ್ತಿಗೆದಾರರ ಸೂಚಿಪಟ್ಟಿಯಿಂದ ತೆಗೆದು ಹಾಕುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಶ್ರೀ ಬಾಬುರೆಡ್ಡಿ ತುಂಗಳ್.—ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಿ ೪ ವರ್ಷವಾಯಿತು. ಕರ್ನಾಟಕ ಸರ್ಕಾರ ತಾಲ್ಲೂಕು ಮಟ್ಟದಲ್ಲಿ ವಿನಿ ವಿಧಾನಸೌಧ ಮಾಡಬೇಕೆಂದು ಹೊಸ ಯೋಜನೆಯನ್ನು ತಯಾರು ಮಾಡಿತ್ತು. ಆ ಯೋಜನೆಯನ್ವಯ ಪ್ರಾರಂಭವಾದದ್ದು ಈ ಕಟ್ಟಡ. ಈ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾದದ್ದು ನೋಡಿದರೆ ಇಷ್ಟು ಹೊತ್ತಿಗೆ ಪೂರ್ಣವಾಗಬೇಕಾಗಿತ್ತು. ಜಮಖಂಡಿ ದೊಡ್ಡ ತಾಲ್ಲೂಕು. ಅಲ್ಲಿದ್ದ ಹಳೆಯ ಕಟ್ಟಡವನ್ನು ನಾಶ ಮಾಡಿದ ಮೇಲೆ ಕೆಲವು ಕಛೇರಿಗಳನ್ನು ಸ್ಥಳಾಂತರಿಸಲಾಯಿತು. ಅಲ್ಲಿ ಒಂದು ಗಂಡಾಂತರ ವಿನಿದೆ ಎಂದರೆ ಟ್ರಜರಿ ಕೂಡ ಅಭದ್ರವಾದ ಕಟ್ಟಡದಲ್ಲಿ ಇದೆ. ಅಲ್ಲಿ ಕಂಟ್ರಾಕ್ಟರ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರಿಗೆ ಅಲ್ಲಿ ವಿನು ಕೆಲಸ ನಡೆದಿದೆ ಎಂಬುದು ಗೊತ್ತಿಲ್ಲ. ಆದರೆ ಅಧಿಕಾರಿಗಳು ಮಾಡಿದ ಕೆಲಸಕ್ಕೆ ಸರಿಯಾಗಿ ಬಿಲ್ ಕೊಡುತ್ತಿಲ್ಲವೆಂದು ಅವರು ಹೇಳುತ್ತಾರೆ. ಹೀಗಾಗಿ ಕೆಲವು ಕಛೇರಿಗಳು ಬಾಡಿಗೆ ಕಟ್ಟಡದಲ್ಲೇ ಉಳಿಯಬೇಕಾಗಿದೆ. ಅಲ್ಲಿ ಸ್ಯಾನಿಟರಿ ಮತ್ತು ಲೈಟ್ ಫಿಟಿಂಗ್ ಕೆಲಸ ಮಾತ್ರ ಉಳಿದಿದೆ. ಮನಸ್ಸು ಮಾಡಿದರೆ ೨-೩ ತಿಂಗಳಲ್ಲಿ ಅದನ್ನು ಮುಗಿಸಬಹುದು. ೧೯೮೭ರ ಆಗಸ್ಟ್ ಗಿಂತಿರೊಳಗಾದರೂ ಆ ಕಟ್ಟಡ ಆರಂಭವಾಗಬೇಕು. ಕಟ್ಟಡ ಪ್ರಾರಂಭವಾಗದೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ,